148th, ಕ್ರ.ಸಂ.41 27/12/22

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ "ಬೆಂಗಳೂರಿನಲ್ಲಿ ಜಿಂಕೆ ಚರ್ಮ ಮಾರಾಟ ಮಾಡಲು ಹೋಗಿದ್ದ ವ್ಯಕ್ತಿಯೊಬ್ಬ ಸಿಸಿಬಿ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದು, ಆತನ ಮಾಹಿತಿ ಆಧರಿಸಿ ಅರಣ್ಯ ಇಲಾಖೆಯ ಡಿ.ಎಫ್.ಒ. ನೇತೃತ್ವದಲ್ಲಿ ಅರಣ್ಯಾಧಿಕಾರಿಗಳು ದಾಳಿ ನಡೆಸಿ ಜಿಂಕೆಗಳು, ಕಾಡು ಹಂದಿಗಳು ಮೊಲ ಹಾಗೂ ಇತ್ಯಾದಿ ವನ್ಯಪ್ರಾಣಿಗಳನ್ನು ಪತ್ತೆ ಮಾಡಿರುವ ಘಟನೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಮಾಹಿತಿ ಪ್ರಕಾರ ಈ ಪ್ರಾಣಿಗಳನ್ನು ದಾವಣಗೆರೆಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ರವರ ಒಡೆತನದಲ್ಲಿರುವ ಕಲ್ಲೇಶ್ವರ ಮಿಲ್‌ನ ಆವರಣದಲ್ಲಿ ಸಾಕಲಾಗಿತ್ತು. ವನ್ಯಪ್ರಾಣಿಗಳನ್ನು ಸಾಕುವುದು ಶಿಕ್ಷಾರ್ಹ ಅಪರಾಧವಾಗಿರುವ ಹಿನ್ನಲೆಯಲ್ಲಿ ಅರಣ್ಯ ಇಲಾಖಾಧಿಕಾರಿಗಳು ಈ ಪ್ರಾಣಿಗಳನ್ನು ಕೋರ್ಟ್ ಗೆ ಹಾಜರುಪಡಿಸಿ ಬಳಿಕ ತಮ್ಮ ವಶಕ್ಕೆ ಪಡೆದಕೊಂಡಿರುತ್ತಾರೆ. ಅಲ್ಲದೆ ಈ ಸಂಬಂಧ ತನಿಖೆ ಆರಂಭಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವುದರ ಜೊತೆಗೆ ನ್ಯಾಯಾಲಯದ ಅನುಮತಿ ಪಡೆದು ವನ್ಯಜೀವಿಗಳನ್ನು ಅರಣ್ಯಕ್ಕೆ ಬಿಡಬೇಕೆ ಅಥವಾ ಪ್ರಾಣಿ ಸಂಗ್ರಹಾಲಯಕ್ಕೆ ರವಾನಿಸಬೇಕೆ ಎಂಬ ಕುರಿತು ನಿರ್ಧಾರ ಕೈಗೊಳ್ಳಲಾಗುವುದೆಂದೂ ಅಧಿಕಾರಿಗಳು ತಿಳಿಸಿರುವುದು ಎಲ್ಲ ಪತ್ರಿಕೆಗಳಲ್ಲೂ ಸಹ ವರದಿಯಾಗಿರುತ್ತದೆ.

ಕಾಯಿದೆಗಳನ್ನು ಮೀರಿ ಅನಧಿಕೃತವಾಗಿ ವನ್ಯಜೀವಿ ಸಾಕಾಣಿಕೆ ಮಾಡಿರುವಂಥ ಈ ಪ್ರಕರಣವನ್ನು ಹಲವು ಸಂಘಟನೆಗಳು ಖಂಡಿಸಿವೆ. ಈ ಘಟನೆಯಲ್ಲಿ ಅರಣ್ಯ ಅಧಿಕಾರಿಗಳು ಸೂಕ್ತ ತನಿಖೆಯನ್ನು ಮಾಡದೆ ಮಿಲ್ ಮಾಲೀಕರು ಹಾಗೂ ಪ್ರಭಾವಿ ವ್ಯಕ್ತಿಗಳು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ರವರ ಹೆಸರನ್ನು ಕೈಬಿಟ್ಟು ಅಲ್ಲಿ ಕೆಲಸ ಮಾಡುವ ಸಿಬ್ಬಂದಿವರ್ಗದವರ ಮೇಲೆ ಕೇಸ್ ದಾಖಲು ಮಾಡಿರುವುದು ಮಾಧ್ಯಮಗಳ ಮೂಲಕ ವರದಿಯಾಗಿರುತ್ತದೆ ಮತ್ತು ಈಗಾಗಲೇ ಧರಣಿ ಮಾಡಿದರೂ ಸಹ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳದೆ ಇರುವುದು ಕಂಡುಬಂದಿರುತ್ತದೆ.

ಈ ಪ್ರಕರಣ ಹಳ್ಳ ಹಿಡಿಯಬಹುದು ಎನ್ನುವ ಸಂಶಯ ಸಾರ್ವಜನಿಕ ವಲಯದಲ್ಲಿ ಇದ್ದು, ಸರ್ಕಾರ ಈ ವಿಚಾರದ ಬಗ್ಗೆ ಹೆಚ್ಚು ಗಮನಹರಿಸಿ ಕಾನೂನು ವ್ಯಾಪ್ತಿ ಮೀರಿ ವನ್ಯಜೀವಿಗಳನ್ನು ಸಾಕಾಣಿಕೆ ಮಾಡಿರುವಂತಹವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ, 1972ರ ಪ್ರಕಾರ ಕ್ರಮ ಕೈಗೊಂಡು ಶಿಕ್ಷೆಗೆ ಗುರಿಪಡಿಸಬೇಕೆಂಬ ಬಗ್ಗೆ" ಸನ್ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.

******

ವಲಯ ಅರಣ್ಯಾಧಿಕಾರಿ, ದಾವಣಗೆರೆ ವಲಯ, ದಾವಣಗೆರೆ ಇವರಿಗೆ ದಿನಾಂಕ: 21-12-2022 ರ ಬೆಳಿಗ್ಗೆ ಸಿಬ್ಬಂದಿಯವರಿಂದ ಬಂದ ಖಚಿತ ವರ್ತಮಾನದ ಮೇರೆಗೆ ದಾವಣಗೆರೆ ನಗರದ ಆನೆಕೊಂಡ ಗ್ರಾಮದ ಬಸಾಪುರ ರಸ್ತೆಯ ಬಂಬೂ ಬಜಾರ್ ಶ್ರೀ ಕಲ್ಲೇಶ್ವರ ರೈಸ್ ಮಿಲ್ ಹಿಂಭಾಗದ ಹಳೆಯ ಶ್ಯಾಮ್‌ಸನ್ಸ್ ಡಿಸ್ಟಿಲರಿ ಆವರಣದ ಕುದುರೆ ಸಾಕಾಣೆ ಕೇಂದ್ರದ ಪಕ್ಕದ ಗೋಡೌನ್ ಆವರಣದಲ್ಲಿ ಅಕ್ರಮವಾಗಿ ವನ್ಯ ಪ್ರಾಣಿಗಳನ್ನು ಸಾಕಾಣಿಕೆ ಮಾಡುತ್ತಿರುವ ಬಗ್ಗೆ ಬಂದ ಮಾಹಿತಿ ಮೇರೆಗೆ ಇಲಾಖಾ ಸಿಬ್ಬಂದಿಯೊಂದಿಗೆ ವಲಯ ಅರಣ್ಯಾಧಿಕಾರಿ, ದಾವಣಗೆರೆ ವಲಯ, ದಾವಣಗೆರೆ, ಇವರು ಸ್ಥಳ ಪರಿಶೀಲಿಸಿ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ-1972ರ ಕಲಂ-9, 40, 42, 42ಎ, 44, 48ಎ, 51 ಮತ್ತು 57ರ ಪ್ರಕಾರ ಪ್ರಕರಣವನ್ನು ದಾಖಲಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ.

...2

ಸದರಿ ಪ್ರಕರಣವು ಸಿಆರ್‌ಪಿಸಿ-200 ರಡಿ ದಾಖಲಿಸಿದ್ದು, ಮಾನ್ಯ ಘನ ನ್ಯಾಯಾಲಯ ಈ ಪ್ರಕರಣಕ್ಕೆ PCR No. 933/2022 ನೀಡಿರುತ್ತದೆ. ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ ರವರ ಆದೇಶ ಸಂಖ್ಯೆ: 3265/2022, ದಿನಾಂಕ : 22-12-2022 ರಲ್ಲಿ ಈ ಪ್ರಕರಣದಲ್ಲಿ ಕೂಲಂಕಷವಾಗಿ ತನಿಖೆ ನಡೆಸಿ ವರದಿ ಸಲ್ಲಿಸಲು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ ವಿಭಾಗ, ದಾವಣಗೆರೆ ಇವರನ್ನು ವಿಚಾರಣಾ ಅಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಿರುತ್ತದೆ.

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ ರವರ PCR No. 933/2022 ಆದೇಶ ಸಂಖ್ಯೆ: 3264/2022, ದಿನಾಂಕ : 22-12-2022 ರಲ್ಲಿ ವಶಪಡಿಸಿಕೊಂಡಂತಹ ಕೆಳಕಂಡ ವನ್ಯಪ್ರಾಣಿಗಳನ್ನು ತಾತ್ಕಾಲಿಕವಾಗಿ ಕೆಲವು ನಿಬಂಧನೆಗಳನ್ನು ವಿಧಿಸಿ, ವಲಯ ಅರಣ್ಯಾಧಿಕಾರಿ, ದಾವಣಗೆರೆ ವಲಯ, ದಾವಣಗೆರೆ ಇವರಿಗೆ ವಶಕ್ಕೆ ಪಡೆದುಕೊಳ್ಳಲು ಆದೇಶಿಸಿರುತ್ತದೆ:-

| ಕ್ರ. ಸಂ. | ವನ್ಯಜೀವಿಗಳ ವಿವರ | ವನ್ಯಜೀವಿಗಳ ಸಂಖ್ಯೆ |
|---|---|---|
| 1 | ಚುಕ್ಕೆ ಜಿಂಕೆ | 07 |
| 2 | ಕೃಷ್ಣಮೃಗ | 11 |
| 3 | ಕಾಡುಹಂದಿ | 07 |
| 4 | ಮುಂಗುಸಿ | 03 |
| 5 | ನರಿ | 02 |
| | **ಒಟ್ಟು** | 30 |

ಮೇಲ್ಕಂಡ ವನ್ಯಪ್ರಾಣಿಗಳನ್ನು ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ಆನಗೋಡು, ಇಲ್ಲಿಗೆ ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್‌ಬಿಹಾರಿ ವಾಜಪೇಯಿ ಜೂವಾಲಜಿಕಲ್ ಪಾರ್ಕ್, ಕಮಲಾಪುರ, ಹೊಸಪೇಟೆ ಇಲ್ಲಿಯ ಪಶುವೈದ್ಯಾಧಿಕಾರಿ ರವರ ಸೂಕ್ತ ನಿಗಾವಣೆ ಮೇಲೆ ಸ್ಥಳಾಂತರಿಸಲಾಗಿರುತ್ತದೆ.

ಮಾನ್ಯ ಘನ ನ್ಯಾಯಾಲಯದ ಆದೇಶದಾನುಸಾರ ಪ್ರಕರಣದ ತನಿಖೆಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ ವಿಭಾಗ, ಇವರು ಕೈಗೊಳ್ಳುತ್ತಿದ್ದು, ಪ್ರಕರಣದ ಕೂಲಂಕಷ ತನಿಖೆಯ ನಂತರ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

**ಇ-ಸಂಖ್ಯೆ:ಅಪಜೀ 218 ಎಫ್‌ಡಬ್ಲ್ಯೂಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ